ಓ.ಎಸ್. ನಂ. 179/2012

ಡಿ.ಡಬ್ಲ್ಯು: 01 (ನಿಂಗಮ್ಮ)

ದಿನಾಂಕ: 08.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: 4 ರಿಂದ 8 ನೇ ಪ್ರತಿವಾದಿ ಪರ – ಶ್ರೀ ಆರ್ ಆರ್ ವಕೀಲರಿಂದ.

ಮಾರಯ್ಯನಿಗೆ ಪಾಲಯ್ಯ, ಓಬಯ್ಯ, ಬೋರಯ್ಯ ಎಂಬ 3 ಜನ ಮಕ್ಕಳು ಇದ್ದರು ಎಂದರೆ ಹೌದು. ನಾನು ಪಾಲಯ್ಯನಿಗೆ ಮೊಮ್ಮಗಳು, ಶಾಂತಮ್ಮಳ ಮಗಳು ಎಂದರೆ ಹೌದು. ನನ್ನನ್ನು ಬೋರಯ್ಯನ 2 ನೇ ಮಗ ಪಾಲಯ್ಯನಿಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಹೌದು. ಮಾರಯ್ಯನ ಮಕ್ಕಳು ಜೀವಂತ ಇದ್ದಾಗ ಅವರುಗಳು ವಿಭಾಗಗೊಂಡಿದ್ದು, ಅದರಲ್ಲಿ ಪಾಲಯ್ಯನಿಗೆ 8.66 ಎಕರೆ, ಬೋರಯ್ಯನಿಗೆ 8.66 ಎಕರೆ, ಓಬಯ್ಯನಿಗೆ 8.69 ಎಕರೆ ಬಂದಿರುತ್ತದೆ ಎಂದರೆ ಹೌದು. ಪಾಲಯ್ಯ ತೀರಿದ ನಂತರ ಆತನ ಮಗಳಾದ ಶಾಂತಮ್ಮ 8.66 ಎಕರೆಯ ಸ್ವಾಧೀನದಲ್ಲಿದ್ದಳು ಎಂದರೆ ಹೌದು. ಓಬಯ್ಯ ತೀರಿದ ನಂತರ ಬೊಮ್ಮಜ್ಜಿ 8.69 ಎಕರೆಗೆ ಸ್ವಾಧೀನದಲ್ಲಿದ್ದಳು ಎಂದರೆ ಹೌದು. ಈಗ ಅವರ ವಾರಸುದಾರರು ಅದರ ಸ್ವಾಧೀನದಲ್ಲಿದ್ದಾರೆ ಎಂದರೆ ಹೌದು.

ಈಗ ನಾವು ಬೋರಯ್ಯನಿಗೆ ಬಂದ ಆಸ್ತಿಯ ಸ್ವಾಧೀನದಲ್ಲಿದ್ದೇವೆ ಎಂದರೆ ಹೌದು. ಓಬಯ್ಯನ ಆಸ್ತಿಯ ಪೂರ್ವಕ್ಕೆ ಪಾಲಮ್ಮಳ ಆಸ್ತಿ, ಪಶ್ಚಿಮಕ್ಕೆ ಕೊಟಗೆ ನಿಂಗಯ್ಯನ ಆಸ್ತಿ, ಉತ್ತರಕ್ಕೆ ಪಾಲಯ್ಯ ಅವರ ಜಮೀನು, ದಕ್ಷಿಣಕ್ಕೆ ಬೋರಯ್ಯರವರ ಜಮೀನು ಇದೆ.

ಓಬಯ್ಯನ ಮಕ್ಕಳು ಎಂದಿಗೂ ಆಸ್ತಿಯನ್ನು ಯಾರಿಗೂ ಮಾರಾಟ ಮಾಡಿರುವುದಿಲ್ಲ ಎಂದರೆ ಹೌದು. ನಾನಾಗಲೀ, ಓಬಯ್ಯನ ಮಕ್ಕಳಾಗಲೀ ನ್ಯಾಯಾಲಯಕ್ಕೆ ಓಡಾಡಿರುವುದಿಲ್ಲ ಎಂದರೆ ಹೌದು.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.